AS – 023

# IV Semester B.Com. Examination, April/May 2012
## (2010-11) (Repeaters Scheme)
## ಕನ್ನಡ ಭಾಷೆ – IV
## ವ್ಯಾವಹಾರಿಕ ಕನ್ನಡ ಮತ್ತು ಸಾಹಿತ್ಯ ಸಂವಾದ – 2

Time : 3 Hours Max. Marks : 90

### ಭಾಗ - 1
### ವ್ಯಾವಹಾರಿಕ ಕನ್ನಡ (50)

I. ಅ) ಮೂರು ಪ್ರಶ್ನೆಗಳಿಗೆ ಉತ್ತರಿಸಿ : **(3×10=30)**

1) ವರದಿ ಎಂದರೇನು ? ಗಣಿ ಕೈಗಾರಿಕೆಯಿಂದ ಆಗುತ್ತಿರುವ ಪರಿಣಾಮಗಳ ಬಗ್ಗೆ ತಜ್ಞರ ಸಮಿತಿಯ ವರದಿಯೊಂದನ್ನು ಸಿದ್ಧಪಡಿಸಿ.

2) ನಗರದಲ್ಲಿನ ಅಕ್ರಮ ಕಟ್ಟಡಗಳ ವಿರುದ್ಧ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿ.ಡಿ.ಎ.) ನಡೆಸಿರುವ ಕಾರ್ಯಾಚರಣೆಯ ಬಗ್ಗೆ ಬೇರೆ ಬೇರೆ ಪತ್ರಿಕೆಗಳ ಶೀರ್ಷಿಕೆಗಳು ಹೀಗಿವೆ,
   - ಬನಶಂಕರಿಯಲ್ಲಿ ಅಕ್ರಮ ವಸತಿ ಕಟ್ಟಡಗಳ ನೆಲಸಮ
   - ಸೇಡು ತೀರಿಸಿಕೊಂಡ ಬಿ.ಡಿ.ಎ.
   - ಜನಸಾಮಾನ್ಯರ ಮೇಲೆ ಬಿ.ಡಿ.ಎ. ಪ್ರಹಾರ
   - ಅಕ್ರಮ ಕಟ್ಟಡಗಳ ನೆಲಸಮದಿಂದ ಕೋಟ್ಯಾಂತರ ಮೌಲ್ಯಗಳ ಆಸ್ತಿ ಕೈವಶ.

   ಧೋರಣೆಯ ದೃಷ್ಟಿಯಿಂದ ಇವುಗಳ ನಡುವಿನ ವ್ಯತ್ಯಾಸವನ್ನು ವಿಶ್ಲೇಷಿಸಿ.

3) ಇಂದಿನ ಪ್ರಚಾರ ಯುಗದಲ್ಲಿ ಜಾಹೀರಾತಿನ ಸ್ಥಾನವೇನು ? ಜಾಹೀರಾತಿನಲ್ಲಿ ಮಹಿಳೆ ಮತ್ತು ಮಕ್ಕಳನ್ನು ಅಗತ್ಯವಿಲ್ಲದಿದ್ದರೂ ಬಳಸಿಕೊಳ್ಳುವುದು ಅವಶ್ಯಕವೇ ?

4) ಕನ್ನಡ ಅಂತರಜಾಲ ಲೋಕವನ್ನು ಪರಿಚಯಿಸಿ.

5) ವಾರ್ಷಿಕ ವರದಿ ಎಂದರೇನು ? ಕಾಲೇಜೊಂದರ ಸಾಂಸ್ಕೃತಿಕ ಚಟುವಟಿಕೆಗಳ ವಾರ್ಷಿಕ ವರದಿಯೊಂದನ್ನು ಸಿದ್ಧಪಡಿಸಿ.

ಆ) ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ : **(4×5=20)**

1) ಕಂಪ್ಯೂಟರ್ ಭಾಷೆಗಳು
2) ಏಕವ್ಯಕ್ತಿ ವರದಿ
3) ಜಾಹೀರಾತಿನಲ್ಲಿ ಪ್ರಸಿದ್ಧ ಕ್ರಿಕೆಟಿಗರು
4) ಸಂಕ್ಷಿಪ್ತ ಜಾಹೀರಾತು
5) ಕಾರ್ಯಕ್ರಮದ ವರದಿ
6) ಕನ್ನಡ ಮತ್ತು ಇ-ಅಂಚೆ.

P.T.O.

## ಭಾಗ - 2

## ಸಾಹಿತ್ಯ ಸಂವಾದ - 2

40

II. ಎರಡು ಪ್ರಶ್ನೆಗಳಿಗೆ ತಾರ್ಕಿಕ ಆಲೋಚನೆ ಆಧರಿಸಿ ಉತ್ತರಿಸಿ : (2×5=10)

1) ಶಕುನಿ–ದುರ್ಯೋಧನರ ಸಂಚಿಗೆ ಧರ್ಮರಾಯ ಹೇಗೆ ಬಲಿಯಾದ ಎಂಬುದನ್ನು 'ದ್ಯೂತದ ಪ್ರಸಂಗ' ಕಾವ್ಯಭಾಗದ ಹಿನ್ನೆಲೆಯಲ್ಲಿ ವಿವರಿಸಿ.

2) ''ಚದುರಂಗದಾಟ ಇವರ ಧೈರ್ಯಬುದ್ಧಿಗಳನ್ನೆಲ್ಲಾ ಮೇದುಬಿಟ್ಟಿದೆ'' ಈ ಮಾತಿನ ಹಿನ್ನೆಲೆಯಲ್ಲಿ ಆಟ ವ್ಯಸನವಾದಾಗ ಆಗುವ ದುಷ್ಪರಿಣಾಮಗಳನ್ನು ವಿವರಿಸಿ.

3) ಅಂತಾರಾಷ್ಟ್ರೀಯ ಕ್ರೀಡೆಯಾದ ಕ್ರಿಕೆಟ್, ಸ್ಥಳೀಯ ಕ್ರೀಡೆಗಳನ್ನೆಲ್ಲಾ ಮೂಲೆಗುಂಪು ಮಾಡಿದೆಯೆ ? ನಿಮ್ಮ ಅಭಿಪ್ರಾಯ ತಿಳಿಸಿ.

4) ಭಾರತದ ಅಗಣಿತ ಜನಸಂಖ್ಯೆಯೇ ಅದರ ಶಕ್ತಿಯೆ ? ಬಿ.ಪಿ.ಓ ಅಥವಾ ಕಾಲ್‌ಸೆಂಟರ್ ಹಿನ್ನೆಲೆಯಲ್ಲಿ ಚರ್ಚಿಸಿ.

III. ಎರಡು ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ ಬರೆಯಿರಿ : (2×5=10)

1) ಆಧುನಿಕ ಜಗತ್ತಿನಲ್ಲಿ ಯಂತ್ರಗಳು ಅನಿವಾರ್ಯವೇ ?

2) ಜಾಗತೀಕರಣದ ಪ್ರಭಾವದಿಂದಾಗಿ ದೇಸೀ ಸಂಸ್ಕೃತಿ ನಾಶಹೊಂದುತ್ತಿದೆಯೇ ?

3) ಕ್ರಿಕೆಟ್ ಬಗ್ಗೆ ಪ್ರೀತಿಯಿದ್ದ ಹುಡುಗರು ಹಳ್ಳಿಗೆ ಬರುತ್ತಿದ್ದ 'ವೃತ್ತಪತ್ರಿಕೆ'ಗಾಗಿ ಯಾವ ರೀತಿ ಕಷ್ಟಪಡುತ್ತಿದ್ದರು ?

4) ಧರ್ಮರಾಯ ನೆತ್ತವನ್ನಾಡುವುದಕ್ಕೆ ಪಣಕ್ಕಿಟ್ಟ ವಸ್ತುಗಳೇನು ?

IV. ಎರಡು ಪ್ರಶ್ನೆಗಳಿಗೆ ಸ್ವಂತ ಆಲೋಚನೆ/ ಅನುಭವಗಳ ಹಿನ್ನೆಲೆಯಲ್ಲಿ ವಿಮರ್ಶಾತ್ಮಕ ಉತ್ತರ ಬರೆಯಿರಿ : (2×10=20)

1) ಗಾಂಧೀಜಿಯ ಕಲ್ಪನೆಯ 'ಸೇವಾಗ್ರಾಮ'ವು ಇಂದಿನ ದಿನಗಳಲ್ಲಿ ಯಾವ ರೀತಿ ಅರ್ಥ ಕಳೆದುಕೊಂಡಿದೆ ?

2) ಜಾಗತೀಕರಣ ಭಾರತಕ್ಕೆ ಅನಿವಾರ್ಯವೇ ?

3) ಕಾಲ್‌ಸೆಂಟರ್ ಉದ್ಯೋಗಕ್ಕೆ ಉತ್ತಮ ವಿದ್ಯಾಭ್ಯಾಸ ಬೇಕಿಲ್ಲವೆನ್ನುವುದನ್ನು ನೀವು ಒಪ್ಪುತ್ತೀರಾ ?

4) ಕ್ರೀಡೆ ಮತ್ತು ರಾಜಕೀಯ ಬಿಡಿಸಲಾರದ ಸಂಬಂಧ ಹೊಂದಿವೆಯೆ ? ಇಂದಿನ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಚರ್ಚಿಸಿ.

---

# IV Semester B.Com. Examination, April/May 2012

(ರಿಪೀಟರ್ಸ್) (2010-11 ಕ್ಕಿಂತ ಹಿಂದಿನದು)

ಕನ್ನಡ ಭಾಷೆ – IV

## ವ್ಯಾವಹಾರಿಕ ಕನ್ನಡ ಮತ್ತು ಬೋಳುವಾರು ಮಹಮದ್‌ಕುಂಞ ಕಥೆಗಳು

Time : 3 Hours  Max. Marks : 90

1. ಕೆಳಗಿನ ಗದ್ಯಭಾಗವನ್ನು ಸಂಕ್ಷೇಪಿಸಿ ಸೂಕ್ತ ಶೀರ್ಷಿಕೆ ಕೊಡಿ. **(1×10=10)**

ನಮ್ಮ ದೇಶ ಕೃಷಿ ಪ್ರಧಾನ ದೇಶ. ರೈತರು ನಮ್ಮ ದೇಶದ ಆಧಾರ. ರೈತರಾಗಲಿ, ಕಾರ್ಮಿಕರಾಗಲಿ ಪ್ರಾಮಾಣಿಕವಾಗಿ ದುಡಿದಾಗ ದೇಶದ ಪ್ರಗತಿ ಸಾಧ್ಯ. ಆದ್ದರಿಂದ ಇವರ ದುಡಿಮೆಯೇ ಬಾಳಿಗೆ ಆಧಾರ. ಶ್ರಮಪಟ್ಟು ದುಡಿಯುವುದು ನಮ್ಮ ಧ್ಯೇಯವಾಗಬೇಕು. ಇದರಿಂದ ನಿಜವಾದ ಪ್ರತಿಫಲ ಸಿಗುತ್ತದೆ. ಉದಾಹರಣೆಯನ್ನು ಗಮನಿಸಬಹುದು ಒಬ್ಬ ಪ್ರಯಾಣಿಕ ಎತ್ತಿನ ಗಾಡಿಯಲ್ಲಿ ಹೋಗುತ್ತಿದ್ದನು, ಮಳೆಗಾಲವಾದ್ದರಿಂದ ದಾರಿಯಲ್ಲಿ ಕೆಸರಿನಲ್ಲಿ ಗಾಡಿಯ ಚಕ್ರ ಹೂತು ಹೋಯಿತು. ಗಾಡಿ ಮುಂದಕ್ಕೆ ಚಲಿಸಲಿಲ್ಲ. ಚಿಂತಾಕ್ರಾಂತನಾಗಿ ಕುಳಿತನು. ಆಗ ದಾರಿಹೋಕನೊಬ್ಬನು ಅವನನ್ನು ನೋಡಿ ವಿಚಾರವೇನೆಂದು ಕೇಳಿ ತಿಳಿದನು. ಆಗ ಅವನು ಯೋಚನೆ ಚಿಂತನೆಗಳಿಂದ ಕೆಲಸವಾಗುವುದಿಲ್ಲ, ಪ್ರಯತ್ನ-ಶ್ರಮ ಮುಖ್ಯ. ಬಾ ಇಬ್ಬರೂ ಸೇರಿ ಚಕ್ರವನ್ನು ಕೆಸರಿನಿಂದ ಎತ್ತಲು ಪ್ರಯತ್ನಿಸಿ ನೋಡೋಣ ಎಂದನು. ಇಬ್ಬರೂ ಪ್ರಯತ್ನಿಸಿದಾಗ ಗಾಡಿಯ ಚಕ್ರ ಮೇಲಕ್ಕೆ ಬಂದಿತು. ಗಾಡಿ ಚಲಿಸಿತು.

2. ಜಾಹೀರಾತಿನ ಸ್ವರೂಪ, ಮಹತ್ವ ಹಾಗೂ ಲಕ್ಷಣಗಳನ್ನು ವಿವರಿಸಿ. **(1×10=10)**

**ಅಥವಾ**

ಅಭ್ಯರ್ಥನ ಪತ್ರ ಎಂದರೇನು ? ಅದರ ಸ್ವರೂಪ ಮತ್ತು ಲಕ್ಷಣಗಳನ್ನು ಮಾದರಿ ಸಹಿತ ವಿವರಿಸಿ.

3. ಕಂಪನಿ ಕಾರ್ಯದರ್ಶಿಯ ಕರ್ತವ್ಯ ಹಾಗೂ ಮಹತ್ವಗಳನ್ನು ತಿಳಿಸಿ. **(1×10=10)**

**ಅಥವಾ**

ಗೃಹ ಕೈಗಾರಿಕಾ ಕಂಪನಿಯೊಂದರಲ್ಲಿ ನಡೆದ ಸಭೆಯ ಕಾರ್ಯಸೂಚಿ ಮತ್ತು ನಡವಳಿಕೆಗಳನ್ನು ಸಿದ್ಧಪಡಿಸಿ.

4. ಏಕವ್ಯಕ್ತಿ ವರದಿಯ ಲಕ್ಷಣಗಳೇನು ? ಹೊಸದೊಂದು ಶಾಲಾ ಶಾಖೆಯನ್ನು ಪ್ರಾರಂಭಿಸುವುದರ ಬಗ್ಗೆ ಒಂದು ಮಾದರಿ ಏಕವ್ಯಕ್ತಿ ವರದಿ ತಯಾರಿಸಿ. **(1×10=10)**

**ಅಥವಾ**

ಸಮಿತಿ ವರದಿಯ ಲಕ್ಷಣಗಳೇನು ? ಬಾಲಕಾರ್ಮಿಕರ ಬಗ್ಗೆ ಸರ್ಕಾರಕ್ಕೆ ಸಮಿತಿ ವರದಿಯೊಂದನ್ನು ಸಿದ್ಧಪಡಿಸಿ.

5. ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ : (4×5=20)

1) ಹುದ್ದೆಗಳ ನೇಮಕಾತಿ ಪತ್ರ

2) ವ್ಯವಹಾರ ಭಾಷೆ

3) ಅಧ್ಯಕ್ಷರ ಭಾಷಣ

4) ಸಂಕ್ಷಿಪ್ತ ವಿವರ

5) ಹಾಜರಾತಿ ವರದಿ

6) ಸಂದರ್ಶನ

6. **ಎರಡು** ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ : (2×5=10)

1) ಅದ್ದಾ ಸಲ್ಮಾಳನ್ನು ತ್ಯಜಿಸಲು ಕಾರಣವೇನು ?

2) ರೊಟ್ಟಿ ಪಾತುಮ್ಮಳ ಕನಸಿನಲ್ಲಿ ಬಂದವರಾರು ? ಕಾರಣವೇನು ?

3) ಸೀದಿ ಸಾಹುಕಾರರು ನರಕಕ್ಕೆ ಹೋಗಲು ಕಾರಣವೇನು ?

4) ಮೆಹರುನ್ನೀಸಳ ಪಾತ್ರ ಪರಿಚಯಿಸಿ.

7. **ಎರಡು** ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ : (2×10=20)

1) 'ದೇವರುಗಳ ರಾಜ್ಯದಲ್ಲಿ' ಕಥೆಯಲ್ಲಿ ಭಿಕ್ಷುಕ ಜೋಸೆಫ್‌ನ ಮತಾಂತರ ಹಾಗೂ ಪರಿಣಾಮಗಳು ಹೇಗೆ ಮೂಡಿ ಬಂದಿದೆ ? ವಿವರಿಸಿ.

2) ಮುಕುಂದಣ್ಣ–ಬೇಬಿಯ ಬಾಂಧವ್ಯ ವ್ಯಕ್ತವಾಗಿರುವ ಬಗೆಯನ್ನು ಸ್ಪಷ್ಟಪಡಿಸಿ.

3) 'ಒಂದು ತುಂಡು ಗೋಡೆ' ಕಥೆಯ ಸ್ವಾರಸ್ಯವನ್ನು ವಿವರಿಸಿ.

4) ಚಂದ್ರಣ್ಣ, ಗಿರಿಜ, ಕೈಜಮ್ಮ, ಜಲೀಲ–ಇವರಲ್ಲಿ ಇಬ್ಬರ ಪಾತ್ರ ಪರಿಚಯ ಮಾಡಿಕೊಡಿ.

---